**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 359/2020** ಸಿ.ಡಬ್ಲ್ಯೂ -32

ಪಿ.ಡಬ್ಲ್ಯೂ -15

ಹೆಸರು : ಶಿವಾನಂದ

ತಂದೆ:ಗಂಡ : ಮಲಕಪ್ಪ

ವಯಸ್ಸು : 54 ವರ್ಷ

ಉದ್ಯೋಗ : ಎಎಸಐ, ನರೋಣಾ

ವಾಸಸ್ಥಳ : ನರೋಣಾ

ದಿನಾಂಕ:08.01.2024

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ನಾನು 2019 ರಿಂದ ಇಲ್ಲಿಯವರೆಗೆ ನರೋಣಾ ಪೋಲಿಸ ಠಾಣೆಯಲ್ಲಿ ಎಎಸಐ ಎಂದು ಕಾರ್ಯ ನಿರ್ವಹಿಸಿರುತ್ತೇನೆ.

ದಿ.11.02.2020 ರಂದು ಸರ್ಕಾರಿ ಆಸ್ಪತ್ರೆಯಿಂದ ಕಲಬುಗಿಯಲ್ಲಿ ಭೇಟಿಯಾಗಿ ಶವಪರಿಕ್ಷೆಯನ್ನು ಕೈಗೊಂಡೆನು. ಒಂದು ಪತ್ರವನ್ನು ಬರೆದು ವೈದ್ಯರಿಗೆ ಸಲ್ಲಿಸಿದೇನು. ವೈದ್ಯರು ಶವ ಪ ಂಚನಾಮೆಯನ್ನು ಮಾಡಿ ಮರಳಿ ಶವವನ್ನು ಹಿಂದಿರುಗಿಸಿದರು. ಶವವನ್ನು ಸಂಬಂಧಪಟ್ಟವರಿಗೆ ಪತ್ರ ಬರೆಯಿಸಿಕೊಂಡು ಸಲ್ಲಿಸಿದೇನು. ಸಾಕ್ಷಿಗೆ ಈಗ ನಿಪಿ-1 ನ್ನು ತೋರಿಸಿ ಅದನ್ನು ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಶವ ಪರಿಕ್ಷಾ ವರದಿಯನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಶವ ಪರಿಕ್ಷಾ ವರದಿಯನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

**ಪಾ. ಸವಾಲು:- ಆರೋಪಿತರ ಪರ ಎಸ್.ಎ.ಕೆ. ವಕೀಲರಿಂದ:**

ದಾಮುರವರ ಶವ ಪರಿಕ್ಷೆಯನ್ನು ಯಾವ ಸಮಯದಲ್ಲಿ ಮಾಡಿರುತ್ತಾರೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಪಂಚರನ್ನು ನಾನೇ ಕರೆದುಕೊಂಡು ಬಂದಿದ್ದೇನೆ. ನಾನು ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ. ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಆರೋಪಿಯಿಂದ ಪ್ರಕರಣ ದಾಖಲಾದ ಕಾರಣ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.